ಪದಬಂಧ



ಎಡದಿಂದ ಬಲಕ್ಕೆ

1 ಆಗ ಸಡಗರದಿಂದ ಸಂಭ್ರಮಿಸಿದ ಆಕಾಶ 3
4 ಆವಾಹನೆ ಮಾಡಿ ಕರೆದು ಸಂಪನ್ನಗೊಳಿಸಿದ ಹೋಮ 3
6 ಮಾಡಿದ ಸಂಚು ಶರದಂತೆ ಹಿಂದೆ ಬಂದು ನಾಟಿದೆ 5
9 ಮಲಗಿದಾಗ ಅರಳಿ ಆಕರ್ಷಿಸಿದ ತಾವರೆ 3
11 ಶಾಲೆಯಲ್ಲಿ ಗುರುಗಳು ಹೇಳಿಕೊಟ್ಟ ಪಾಠದ ಅರಿವು 3
13 ಹರ ರಹದಾರಿ ನೀಡಿದರೂ ಸಾವಿರ ಬಾರಿ ಬಂದ ಅಗಲಿಕೆಯ ನೋವು 3
14 ಕ್ರಿಕೆಟ್ ಆಟಗಾರ ಪ್ರೇಮಿಗಳ ಆತಂಕ ನಿವಾರಿಸಿ ಬಾರಿಸಿದ ನೂರು ರನ್ನು 3
18 ಮುಡಿಗೇರದ ಪೂಜೆಗೂ ಸಿಗದ ಕಾಡಿನಲ್ಲಿ ವಿಕಸಿಸಿದ ಪುಷ್ಪ 5
19 ರಾಮೇಶ್ವರದಿಂದ ಮರಳಿ ಬರುವಾಗ ಮರ ತಂದ ಉಸುಕು 3
22 ಕಡುಗಲಿಗೂ ನಡು ಬಳಿ ಬಂದ ಕಂಪನ 3

ಮೇಲಿನಿಂದ ಕೆಳಕ್ಕೆ

1 ದೇಗುಲ ಪೂಜೆಗೆ ಆಗಮಿಸಿದ ಪೂಜಾಶಾಸ್ತ್ರ ಪ್ರವೀಣ 4
2 ಪತಿಯ ಬೇಡಿಕೆಗೆ ಸಮ್ಮತಿಸಿದ ಪತ್ನಿ 2
3 ಗುಂಜಾರವದ ನಾದ ತಂದ ತನ್ಮಯತೆ 2
4 ಹರಿವಾಣದಲ್ಲಿಟ್ಟು ತರಿಸಿದ ದುಡ್ಡು 2
5 ನಲ್ಲ ಪ್ರೀತಿಯಿಂದ ಮಾಡಿದ ಆಶೀರ್ವಾದ 4
7 ಬರುಜು ಮಾರಿದಾಗ ಹಾಕಬೇಕಾಗಿ ಬಂದ ಸಹಿ 2
8 ಹೊಂಬಾಳೆಯಂತಹ ಬದುಕು 2
10 ಮರ ಏರಿ ಮತ್ಸ್ಯದ ಮೇಲೆ ತೀರಿಸಿಕೊಂಡ ಸೇಡು 3
12 ಬ್ರಹ್ಮ ಹಣೆಯ ಮೇಲೆ ಬರೆದ ಬರಹ 3
13 ವಿಹಾರಕ್ಕೆ ಹಂಗಾಮಿಯಾಗಿ ಹಾರಾಟ ಮಾಡಿದ ಪಕ್ಷಿ 4
15 ಸರಣಿಯಾಗಿ ಕಣಿ ಕೇಳಿದ ಗ್ರಾಮ ಲೆಕ್ಕಾಧಿಕಾರಿ 4
16 ಬಂಧನದಲ್ಲಿರುವಾಗ ಖೈದಿ ಗಳಿಸಿದ ಹಣ 2
17 ಕೈಲಾಸವನ್ನೂ ಕಾಣಿಸುವ ಶಕ್ತಿಯುತ ದುಡ್ಡು 2
18 ಆಳು ಹೊತ್ತು ತಂದ ದವಸ ಧಾನ್ಯ 2
19 ಜನರೆಲ್ಲರನ್ನು ಕಾಯಿಸಿದ ನಂತರ ಬಂದ ಪ್ರೇಮಿ 2
20 ಮಾಯಾನದಿ ದಾಟುವಾಗ ಹೋದ ಮರ್ಯಾದೆ 2

## 16—04—2026 ಉತ್ತರ

ಎಡದಿಂದ ಬಲಕ್ಕೆ

2. ಲೇಹ 4. ಇಂಗು 6. ತಿದಿ 7. ಗಜೇಂದ್ರ 8. ಕಾಳು 9. ಬಹುಗುಣ 11. ಪಯೋನಿಧಿ 13. ಮುಗಿಲ್ದನಿ 15. ಕಾತ್ಯಾಯನಿ 17. ಮಣ 18. ಮಡದಿ 19. ಗೋವಾ 20. ಬಾಣ 21. ಗರೆ

ಮೇಲಿನಿಂದ ಕೆಳಕ್ಕೆ

ಪ್ರತಿಬಿಂಬ 3. ಹಗರಣ 4. ಇಂದ್ರಛಾಪ 5. ತೋಳುಬಂಧಿ 10. ಹುಡುಗಿ 12. ನಿಲಯ 13. ಮುಚ್ಚುಮರೆ 14. ನಿಷ್ಪ್ರಮಣ 15. ಕಾಲಂದಿಗೆ 16. ನಿಷ್ಪ್ರಮಣ

■ ಅ.ನಾ. ಪ್ರಹ್ಲಾದರಾವ್

ಮಹಿಳಾ ವಿಜ್ಞಾನಿ

# ನಂಜನಗೂಡಿನ ಎಂಜಿನಿಯರ್ ರಾಜೇಶ್ವರಿ

ಕರ್ನಾಟಕ ರಾಜ್ಯದ ಪ್ರಥಮ ಮಹಿಳಾ ಎಂಜಿನಿಯರ್ ಎಂದೇ ಹೆಸರುವಾಸಿಯಾಗಿರುವ ರಾಜೇಶ್ವರಿ ಚಟರ್ಜಿ (1922– 2010) ಅವರು ಜನಿಸಿದ್ದು ನಂಜನಗೂಡಿನಲ್ಲಿ. ಕನ್ನಡದ ಕಣ್ವ ಬಿ.ಎಂ.ಶ್ರೀ ಅವರ ತಮ್ಮನ ಮಗಳಾದ ಇವರು ತಮ್ಮ ಅಜ್ಜಿ ಪ್ರಾರಂಭಿಸಿದ 'ಸ್ಪೆಷಲ್ ಇಂಗ್ಲಿಷ್ ಸ್ಕೂಲ್'ನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದರು. ಬೆಂಗಳೂರಿನ ಸೆಂಟ್ರಲ್ ಕಾಲೇಜು ಸೇರಿಕೊಂಡು ಗಣಿತ ಮತ್ತು ಭೌತವಿಜ್ಞಾನ ವಿಷಯಗಳಲ್ಲಿ ಪ್ರಥಮ ರ‍್ಯಾಂಕ್‌ನೊಂದಿಗೆ ಬಿ.ಎಸ್ಸಿ ಆನರ್ಸ್ ಮತ್ತು ಗಣಿತ ಎಂ.ಎಸ್ಸಿ. ಪದವಿಗಳನ್ನು ಪಡೆದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಭಾವಿಸಂ) ಸೇರಲು ಸಂದರ್ಶನಕ್ಕೆ ಹಾಜರಾದರು. ಸರ್ ಸಿ.ವಿ. ರಾಮನ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡುವ ಬಯಕೆ ಇತ್ತು. ಭೌತವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಇಲ್ಲದ್ದರಿಂದ ಬಯಕೆ ಈಡೇರಲಿಲ್ಲ. ಆಗ ಸಿ.ವಿ. ರಾಮನ್ ಭಾವಿಸಂನ ನಿರ್ದೇಶಕರಾಗಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರ ವಿದೇಶದಲ್ಲಿ ಉನ್ನತ ಅಧ್ಯಯನ ಮಾಡಲು ಸ್ಕಾಲರ್‌ಶಿಪ್‌ಗಳನ್ನು ಕೊಡುವ ವ್ಯವಸ್ಥೆ ಜಾರಿಗೆ ಬಂತು. ಈ ಅವಕಾಶ ಪಡೆದುಕೊಂಡ ರಾಜೇಶ್ವರಿ ಮಿಚಿಗನ್ ಯೂನಿವರ್ಸಿಟಿ ಸೇರಿಕೊಂಡು ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಮಾಸ್ಟರ್ಸ್ ಪದವಿ ಮತ್ತು ಪಿಎಚ್.ಡಿ ಪಡೆದರು.



ನಂತರ ಬೆಂಗಳೂರಿಗೆ ಮರಳಿ ಭಾರತೀಯ ವಿಜ್ಞಾನ ಸಂಸ್ಥೆಯ ಎಲೆಕ್ಟ್ರಿಕಲ್ ಕಮ್ಯುನಿಕೇಶನ್ ಎಂಜಿನಿಯರಿಂಗ್ ವಿಭಾಗದಲ್ಲಿ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿಕೊಂಡರು. ಹಾಗೆ ಕೆಲಸಕ್ಕೆ ಸೇರಿಕೊಂಡ ಮೊದಲ ಪ್ರಾಧ್ಯಾಪಕಿ ಇವರು. ಸಹೋದ್ಯೋಗಿಯಾಗಿದ್ದ ಶಿಶಿರ್ ಕುಮಾರ್ ಚಟರ್ಜಿ ಅವರನ್ನು ಮದುವೆ ಮಾಡಿಕೊಂಡರು. ಅಲ್ಲಿದ್ದಾಗ ಹಲವು ಉನ್ನತ ಮಟ್ಟದ ಸಂಶೋಧನಾ ಪ್ರಬಂಧಗಳನ್ನು ರಚಿಸಿದ ರಾಜೇಶ್ವರಿ ಪತಿಯೊಂದಿಗೆ ಸೇರಿ ಭಾರತದ ಪ್ರಥಮ ಮೈಕ್ರೊವೇವ್ ಸಂಶೋಧನಾ ಪ್ರಯೋಗಾಲಯವನ್ನು ನಿರ್ಮಿಸಿದರು. ಪ್ರಾಧ್ಯಾಪಕರಾಗಿ ಬಡ್ತಿ ಹೊಂದಿ ಕೊನೆಗೆ ಎಲೆಕ್ಟ್ರಿಕಲ್ ಕಮ್ಯುನಿಕೇಶನ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡರು. 20 ವಿದ್ಯಾರ್ಥಿಗಳಿಗೆ ಪಿಎಚ್.ಡಿ ಮಾರ್ಗದರ್ಶಕರಾಗಿದ್ದ ರಾಜೇಶ್ವರಿ ಒಟ್ಟು ನೂರಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದರು.

ಎಲೆಕ್ಟ್ರಾನ್ ಟ್ಯೂಬ್ ಸರ್ಕ್ಯೂಟ್‌ಗಳು ಮತ್ತು ಮೈಕ್ರೊವೇವ್ ತಂತ್ರಜ್ಞಾನದಲ್ಲಿ ಪರಿಣತರಾಗಿದ್ದ ರಾಜೇಶ್ವರಿ ತಮ್ಮ ವೈಜ್ಞಾನಿಕ ಸಾಧನೆಗಾಗಿ ಮೌಂಟ್ ಬ್ಯಾಟನ್ ಬಹುಮಾನ, ಜೆಸಿ ಬೋಸ್ ಮೆಮೋರಿಯಲ್ ಬಹುಮಾನ ಮತ್ತು 'ಮೇಘನಾದ ಸಹ' ನೆನಪಿನ ಪ್ರಶಸ್ತಿಯನ್ನು ಪಡೆದಿದ್ದರು. ಮೈಕ್ರೊವೇವ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಇವರು ಮಾಡಿದ ಸಂಶೋಧನೆಗಳು ರಾಡಾರ್ ಮತ್ತು ಸಂವಹನ ವ್ಯವಸ್ಥೆಯಲ್ಲಿ ಬಹಳ ಮುಖ್ಯವಾಗಿವೆ.

■ ಗುರುರಾಜ್ ಎಸ್. ದಾವಣಗೆರೆ